# All India Radio: Bangalore
# National Bulletin In Kannada
# 09.04.2025  13.10 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**09.04.2025  13.10 p.m.**

****************

ಮುಖ್ಯಾಂಶಗಳು

೧.    ರೆಪೊ ದರವನ್ನು ೨೫ ಮೂಲಾಂಶ ಕಡಿತದೊಂದಿಗೆ ಶೇಕಡ ೬ ಕ್ಕೆ ಇಳಿಸಿದ ಭಾರತೀಯ ರಿಸರ್ವ್ ಬ್ಯಾಂಕ್

೨.    ಸ್ವದೇಶಿ ಉತ್ಪನ್ನಗಳಿಗೆ ಉತ್ತೇಜನ ನೀಡಲು ಪ್ರಧಾನಮಂತ್ರಿ ನರೇಂದ್ರ ಮೋದಿ ಕರೆ

೩.    ಬ್ಯಾಂಕಿಂಗ್ ವಲಯದಲ್ಲಿ ವಿದೇಶಿ ಹೂಡಿಕೆಗೆ ಸರ್ಕಾರದಿಂದ ಪ್ರೋತ್ಸಾಹ - ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್

೪.    ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರತಿ ಸುಂಕಗಳು ಇಂದಿನಿಂದ ಜಾರಿ

೫.    ಐಪಿಎಲ್ ಟಿ-೨೦ ಕ್ರಿಕೆಟ್; ಇಂದು ಗುಜರಾತ್ ಟೈಟಾನ್ಸ್ - ರಾಜಸ್ಥಾನ ರಾಯಲ್ಸ್ ತಂಡಗಳ ಹಣಾಹಣಿ

****************

ಭಾರತೀಯ ರಿಸರ್ವ್ ಬ್ಯಾಂಕ್ ಇಂದು ತನ್ನ ರೆಪೊ ದರವನ್ನು ೨೫ ಮೂಲಾಂಶ ಕಡಿತದೊಂದಿಗೆ ಶೇಕಡ ೬ ಕ್ಕೆ ಇಳಿಸಿದೆ.

ಈ ಕುರಿತು ಮುಂಬೈನಲ್ಲಿಂದು ಘೋಷಿಸಿದ ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ, ಆರು ಸದಸ್ಯರ ಸಮಿತಿ, ಪ್ರಸಕ್ತ ಹಣಕಾಸು ವರ್ಷದ ಮೊದಲ ಸಭೆಯಲ್ಲಿ ದರ ಕಡಿತಕ್ಕೆ ಸರ್ವಾನುಮತದಿಂದ ಮತ ಚಲಾಯಿಸಿದೆ ಎಂದು ತಿಳಿಸಿದರು.

ಐದು ವರ್ಷಗಳ ಬಳಿಕ ಮೊದಲ ಬಾರಿಗೆ ಆರ್‌ಬಿಐ ತನ್ನ ರೆಪೊ ದರವನ್ನು ಕಡಿತಗೊಳಿಸಿದೆ. ಪರಿಣಾಮವಾಗಿ ಸ್ಥಿರ ಠೇವಣಿ ಸೌಲಭ್ಯ ಎಸ್‌ಡಿಎಫ್ ದರ ಶೇಕಡ ೫.೭೫ ರಷ್ಟಕ್ಕೆ ನಿಗದಿಪಡಿಸಲಾಗಿದ್ದು, ಕನಿಷ್ಠ ಸ್ಥಿರ ಸೌಲಭ್ಯ-ಎಮ್‌ಎಸ್‌ಎಫ್ ದರ ಮತ್ತು ಬ್ಯಾಕ್ ದರ ಶೇಕಡ ೬.೨೫ ಕ್ಕೆ ಸರಿಹೊಂದಿಸಲಾಗಿದೆ.

ಈ ಹಿಂದೆ ನಿರೀಕ್ಷಿಸಲಾದ ಜಿಡಿಪಿ ಬೆಳವಣಿಗೆಯ ಅಂದಾಜನ್ನು ಶೇಕಡ ೬.೭ ರಿಂದ ೬.೫ ಕ್ಕೆ ಇಳಿಸಲು ಸಮಿತಿ ನಿರ್ಧರಿಸಿದೆ. ಚಿಲ್ಲರೆ ಹಣದುಬ್ಬರ ೨೦೨೫-೨೬ ರಲ್ಲಿ ಶೇಕಡ ೪ ರಷ್ಟಿರಬಹುದೆಂದು ನಿರೀಕ್ಷಿಸಲಾಗಿದೆ ಎಂದು ಆರ್‌ಬಿಐ ಗವರ್ನರ್ ಮಾಹಿತಿ ನೀಡಿದ್ದಾರೆ.

ಧ್ವನಿ: ಸಂಜಯ್ ಮಲ್ಹೋತ್ರಾ, ಆರ್‌ಬಿಐ ಗವರ್ನರ್

***************

ಭಾರತದಲ್ಲೇ ತಯಾರಿಸಿದ ವಸ್ತುಗಳಿಗೆ ಆದ್ಯತೆ ನೀಡಿ, ಇತರರಿಗೂ ಅವುಗಳನ್ನು ಖರೀದಿಸಲು ಪ್ರೋತ್ಸಾಹಿಸುವಂತೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ನವದೆಹಲಿಯಲ್ಲಿಂದು ನವಕರ್ ಮಹಾಮಂತ್ರ ದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ವಿಕಸಿತ ಭಾರತದ ಗುರಿಯೊಂದಿಗೆ ನವಕರ್ ಮಹಾಮಂತ್ರದ ತತ್ವ ಹೊಂದಾಣಿಕೆಯಾಗುತ್ತದೆ ಎಂದರು.

ಇದೇ ವೇಳೆ ನೀರಿನ ಸಂರಕ್ಷಣೆ, ತಾಯಿಯ ಹೆಸರಲ್ಲಿ ಒಂದು ಸಸಿ, ಸ್ವಚ್ಛತೆ, ಓಕಲ್ ಫಾರ್ ಲೋಕಲ್, ಸ್ವದೇಶಿ ಪ್ರವಾಸೋದ್ಯಮ, ನೈಸರ್ಗಿಕ ಕೃಷಿ ಅಳವಡಿಕೆ, ಆರೋಗ್ಯಕರ ಜೀವನ ಶೈಲಿ, ಯೋಗ ಮತ್ತು ಕ್ರೀಡೆ ಒತ್ತು ಹಾಗೂ ಅಂತಿಮವಾಗಿ ಬಡವರಿಗೆ ಸಹಾಯ ಮಾಡುವ ೯ ನಿರ್ಣಯಗಳನ್ನು ಕೈಗೊಳ್ಳಲು ಜನತೆಗೆ ಪ್ರಧಾನಿ,ಕರೆ ನೀಡಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ

***************

ಭಾರತೀಯ ಕಲಾವಿದರಿಗೆ ತಮ್ಮ ವಿಷಯವನ್ನು ರಚಿಸಲು ಮತ್ತು ಅವುಗಳನ್ನು ಜಾಗತಿಕ ವೇದಿಕೆಗೆ ಕೊಂಡೊಯ್ಯಲು ವೇವ್ಸ್ ಸಹಕಾರಿ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಖಾಸಗಿ ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ  ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆಯಲ್ಲಿ ಜಗತ್ತು ವೇಗವಾಗಿ ಪ್ರಗತಿ ಸಾಧಿಸಿದಂತೆ ಕಲೆ, ಸಂಗೀತ, ಸಂಸ್ಕೃತಿ ಮತ್ತು ಸೃಜನಶೀಲತೆಯ ಮೇಲೆ ಕೇಂದ್ರೀಕರಿಸುವ ಮಹತ್ವವನ್ನು ಒತ್ತಿ ಹೇಳಿದ ಪ್ರಧಾನಿ, ಮನರಂಜನೆ ಪ್ರಸ್ತುತ ಅತಿದೊಡ್ಡ ಜಾಗತಿಕ ಉದ್ಯಮಗಳಲ್ಲಿ ಒಂದಾಗಿದ್ದು, ಇದರ ವ್ಯಾಪ್ತಿ ಮತ್ತಷ್ಟು ವಿಸ್ತಾರವಾಗಲಿದೆ ಎಂದರು.

ಚಲನಚಿತ್ರಗಳು, ಪಾಡ್‌ಕ್ಯಾಸ್ಟ್‌ಗಳು, ಗೇಮಿಂಗ್, ಸಂಗೀತ, ◌ಂಖ ಮತ್ತು ಗಿಖ ಸೇರಿದಂತೆ ಭಾರತದ ರೋಮಾಂಚಕ ಮತ್ತು ಸೃಜನಶೀಲ ಉದ್ಯಮಗಳ ಬಗ್ಗೆ ಪ್ರಸ್ತಾಪಿಸಿದ ಪ್ರಧಾನಿ, ಈ ಉದ್ಯಮಗಳನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ಗುರಿ ಹೊಂದಿರುವ "ಕ್ರಿಯೇಟ್ ಇನ್ ಇಂಡಿಯಾ" ಉಪಕ್ರಮದ ಬಗ್ಗೆ ಅವರು ಒತ್ತಿ ಹೇಳಿದರು.

***************

ವಿದೇಶಿ ಬ್ಯಾಂಕ್‌ಗಳಿಗೆ ಭಾರತ ಬೆಳವಣಿಗೆಯ ಅವಕಾಶ ನೀಡುತ್ತಿದ್ದು, ಸರ್ಕಾರ ಬ್ಯಾಂಕಿಂಗ್ ವಲಯದಲ್ಲಿ ವಿದೇಶಿ ಹೂಡಿಕೆಯನ್ನು ಸಕ್ರಿಯವಾಗಿ ಪ್ರೋತ್ಸಹಿಸುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಲಂಡನ್‌ನಲ್ಲಿ ನಡೆದ ಭಾರತ-ಬ್ರಿಟನ್ ಹೂಡಿಕೆದಾರರ ದುಂಡು ಮೇಜಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನವಭಾರತ ರೂಪಿಸುತ್ತಿರುವ ಸರ್ಕಾರದ ನೀತಿಗಳಿಂದ ನಿರಂತರ ಆರ್ಥಿಕ ಬೆಳವಣಿಗೆ ಮತ್ತು ಹೂಡಿಕೆ ಅವಕಾಶಗಳನ್ನು ಸಕ್ರಿಯಗೊಳಿಸಲು ಆದ್ಯತೆ ನೀಡಲಾಗಿದೆ. ಜಿ-೨೦ ರಾಷ್ಟ್ರಗಳಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ವಿಮಾ ಮಾರುಕಟ್ಟೆ ಹೊಂದಿರುವ ಭಾರತ ೨೦೩೨ರ ವೇಳೆಗೆ  ೬ನೇ ಅತಿದೊಡ್ಡ ವಿಮಾ ಮಾರುಕಟ್ಟೆಯಲ್ಲಿ ಆಗಲಿದೆ.

೨೦೨೨-೨೩ ರಲ್ಲಿ ಭಾರತದ ಡಿಜಿಟಲ್ ಆರ್ಥಿಕತೆ ದೇಶದ ಆರ್ಥಿಕ ಬೆಳವಣಿಗೆಗೆ ಗಮನಾರ್ಹ ಕೊಡುಗೆ ನೀಡಿದ್ದು, ಜಿಡಿಪಿಯ ಶೇಕಡ ೧೧.೭೪ ರಷ್ಟು ಪಾಲು ಹೊಂದಿತ್ತು ಎಂದು ಹೇಳಿದ್ದಾರೆ.

***************

ಅಮೆರಿಕಾ ಅಧ್ಯಕ್ಷ ಡೋನಾಲ್ಡ್ ಟ್ರಂಪ್, ಚೀನಾ ಮೇಲಿನ ಶೇಕಡ ೧೦೪ ರಷ್ಟು ಸುಂಕ ಸೇರಿದಂತೆ ವಿಧಿಸಿರುವ ಪ್ರತಿ ಸುಂಕಗಳು ಇಂದಿನಿಂದ ಜಾರಿಗೆ ಬಿಂದಿವೆ.

ಚೀನಾ ಮೇಲೆ ಸದ್ಯ ಅಮೆರಿಕಾ ಶೇಕಡ ೧೦೪ ರಷ್ಟು ಸುಂಕ ವಿಧಿಸಿದೆ. ಚೀನಾ ಅಮೆರಿಕ ಉತ್ಪನ್ನಗಳ ಮೇಲೆ ಶೇಕಡ ೩೪ ಅಮದು ಸುಂಕ ವಿಧಿಸಿತ್ತು. ಇದರಿದ ಪ್ರತಿಕಾರವಾಗಿ ಅಮೆರಿಕಾ ಇದೀಗ ಶೇಕಡ ೧೦೪ ರಷ್ಟು ಸುಂಕ ವಿಧಿಸಿದೆ. ಇದರ ಜತೆಗೆ ಭಾರತದ ಮೇಲೆ ವಿಧಿಸಿರುವ ಶೇಕಡ ೨೬ ರ ಆಮದು ಸುಂಕ ಕೂಡ ಇಂದಿನಿಂದ ಜಾರಿಗೆ ಬಂದಿದೆ.

ಇದಲ್ಲದೆ, ವಿಯಟ್ನಾಂಗೆ ಶೇಕಡ ೪೬, ಥೈವಾನ್ ಶೇಕಡ ೩೨, ದಕ್ಷಿಣ ಕೊರಿಯಾ ಶೇಕಡ ೨೫, ಜಪಾನ್ ಶೇಕಡ ೨೪ ಮತ್ತು ಯರೋಪಿಯನ್ ದೇಶಗಳ ಮೇಲೆ ಶೇಕಡ ೨೦ ಸುಂಕ ವಿಧಿಸಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಪಿಯುಷ್ ಗೋಯಲ್, ಫೆಬ್ರವರಿಯಲ್ಲಿ ಪ್ರಧಾನಿ ಮೋದಿ ಮತ್ತು ಅಮೆರಿಕಾ ಅಧ್ಯಕ್ಷ ಟ್ರಂಪ್ ನಡುವೆ ದ್ವಿಪಕ್ಷೀಯ ಒಪ್ಪಂದ ನಡೆದಿದೆ. ಭಾರತವು ಸರಣಿ ಒಪ್ಪಂದ ಮಾಡಿಕೊಂಡಿದ್ದು, ಎಲ್ಲವೂ ಸರಿಯಾದ ಮಾರ್ಗದಲ್ಲಿ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

***************

ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಹಾಗೂ ವೇವ್‌ಲ್ಯಾಪ್ಸ್ ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸುತ್ತಿರುವ ಎಕ್ಸ್‌ಆರ್ ಕ್ರಿಯೇಟರ್ ಹ್ಯಾಕಥಾನ್, ಮೌಲ್ಯಮಾಪನದ ಅಂತಿಮ ಹಂತ ತಲುಪಿದ್ದು, ವಿಜೇತರಿಗೆ ಬಹುಮಾನ ವಿತರಣೆ ಸಮಾರಂಭ ಇಂದು ನಡೆಯಲಿದೆ.

ಈ ಹ್ಯಾಕಥಾನ್ ಮುಂದಿನ ತಿಂಗಳ ೧ ರಿಂದ ೪ ರವರೆಗೆ ಮುಂಬೈನಲ್ಲಿ ನಡೆಯಲಿರುವ ವಿಶ್ವ ದೃಶ್ಯ-ಶ್ರವಣ ಮತ್ತು ಮನರಂಜನಾ ಶೃಂಗಸಭೆ- ವೇವ್ಸ್ ನ ಒಂದು ಭಾಗವಾಗಿದೆ.

ಎಕ್ಸ್ ಆರ್ ಕ್ರಿಯೇಟರ್ ಹ್ಯಾಕಥಾನ್ ವಿಸ್ತೃತ ರಿಯಾಲಿಟಿ ತಂತ್ರಜ್ಞಾನಗಳಲ್ಲಿ ನಾವೀನ್ಯತೆಯನ್ನು ಉತ್ತೇಜಿಸುವ ರಾಷ್ಟ್ರವ್ಯಾಪಿ ಉಪಕ್ರಮವಾಗಿದ್ದು, ದೇಶಾದ್ಯಂತದ ೧೫೦ ಕ್ಕೂ ಹೆಚ್ಚು ನಗರಗಳಿಂದ ೨ ಸಾವಿರದ ೨೦೦ ಕ್ಕೂ ಹೆಚ್ಚು ಭಾಗವಹಿಸುವಿಕೆಯನ್ನು ಕಂಡಿದೆ.

***************

ಬಹು ವಲಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರಕ್ಕಾಗಿ ಬಂಗಾಳ ಕೊಲ್ಲಿ ಉಪಕ್ರಮ- ಬಿಮ್‌ಸ್ಟೆಕ್, ಕೃಷಿ ಸಚಿವರ ಮಟ್ಟದ ಸಭೆ ಇಂದು ಕಠ್ಮಂಡುವಿನಲ್ಲಿ ಪ್ರಗತಿಯಲ್ಲಿದೆ.

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಭೂತಾನ್‌ನ ಲಿಯಾನ್ಪೊ ಯೂಂಟೆನ್ ಫುಂಟ್ಶೋ ಅವರು ಸಭೆಯಲ್ಲಿ ಭಾಗವಹಿಸಲು ನಿನ್ನೆ ಸಂಜೆ ಕಠ್ಮಂಡುವಿಗೆ ಆಗಮಿಸಿದರು.

ಇದಕ್ಕೂ ಮೊದಲು, ಸಚಿವ ಮಟ್ಟದ ಸಭೆಯ ಕಾರ್ಯಸೂಚಿಯನ್ನು ಸಿದ್ಧಪಡಿಸಲು ಕಾರ್ಯದರ್ಶಿ ಮಟ್ಟದ ಸಭೆಯನ್ನು ಕಠ್ಮಂಡುವಿನಲ್ಲಿ ನಡೆಸಲಾಯಿತು.

ಬಿಮ್‌ಸ್ಟೆಕ್ ನ ಏಳು ಸದಸ್ಯ ರಾಷ್ಟ್ರಗಳಲ್ಲಿ ಮೂರು ರಾಷ್ಟ್ರಗಳ ಕೃಷಿ ಸಚಿವರು ಸಭೆಯಲ್ಲಿ ವೈಯಕ್ತಿಕವಾಗಿ ಹಾಗೂ ಉಳಿದ ದೇಶಗಳ ಸಚಿವರು ವರ್ಚುವಲ್ ಆಗಿ ಸಭೆಯಲ್ಲಿ ಪಾಲ್ಗೊಂಡಿದ್ದಾರೆ. ನೇಪಾಳದ ಕೃಷಿ ಮತ್ತು ಜಾನುವಾರು ಅಭಿವೃದ್ಧಿ ಸಚಿವ ರಾಮನಾಥ್ ಅಧಿಕಾರಿ ಸಚಿವರ ಮಟ್ಟದ ಸಭೆಯ ಅಧ್ಯಕ್ಷತೆ ವಹಿಸಿದ್ದಾರೆ.

ಕೃಷಿಯ ಸ್ಥಿತಿ ಮತ್ತು ಸವಾಲುಗಳು ಹಾಗೂ ಸದಸ್ಯ ರಾಷ್ಟ್ರಗಳ ನಡುವಿನ ಸಹಯೋಗಕ್ಕೆ ಸಂಬಂಧಿಸಿದ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲಾಗುತ್ತಿದೆ.

***************

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್- ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ಹಾಗೂ ರಾಜಸ್ಥಾನ ರಾಯಲ್ಸ್ ತಂಡಗಳು ಸೆಣಸಲಿವೆ. ಪಂದ್ಯ ರಾತ್ರಿ ೭:೩೦ ಕ್ಕೆ ಆರಂಭವಾಗಲಿದೆ.

ಚಂಡೀಗಢದಲ್ಲಿ ಕಳೆದ ರಾತ್ರಿ ನಡೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡ, ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ೧೮ ರನ್‌ಗಳಿಂದ ಪರಾಭವಗೊಳಿಸಿತು.

****************

ಚೀನಾದ ನಿಗ್ಬೋದಲ್ಲಿ ನಿನ್ನೆ ಆರಂಭವಾಗಿರುವ ಬ್ಯಾಡ್ಮಿಂಟನ್ ಏಷ್ಯಾ ಕಪ್ ಪಂದ್ಯಾವಳಿಯ ಮಿಶ್ರ ಡಬಲ್ಸ್ ವಿಭಾಗದ ತಮ್ಮ ಮೊದಲ ಪಂದ್ಯದಲ್ಲಿ ಭಾರತ ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ಜೋಡಿ ಗೆಲುವು ಸಾಧಿಸಿ ಪ್ರೀ ಕ್ವಾರ್ಟರ್ ಫೈನಲ್ ಹಂತಕ್ಕೆ ಏರಿದ್ದಾರೆ.

ಮೊದಲ ಸುತ್ತಿನ ಪಂದ್ಯದಲ್ಲಿ ಭಾರತದ ಜೋಡಿ, ವಿಶ್ವ ೧೪ನೇ ಶ್ರೇಯಾಂಕಿತ ಜೋಡಿಯನ್ನು ೧೫-೨೧, ೨೧-೧೨, ೨೧-೧೧ ಸೆಟ್‌ಗಳ ಅಂತರದಲ್ಲಿ ಸೋಲಿಸಿತು.

ಮತ್ತೊಂದು ಭಾರತದ ಜೋಡಿ, ಆಷಿತ್ ಸೂರ್ಯ, ಅಮೃತ ಪ್ರಮುಥೇಶ್ ಜೋಡಿ, ಶ್ರೀಲಂಕಾದ ತುಲಿತ್ ಪಳ್ಳಿಯಾಗುರು ಮತ್ತು ಪಾಂಚಾಲಿ ಅಧಿಕಾರಿ ಜೋಡಿಯನ್ನು ೨೧-೯, ೨೧-೧೧ ಅಂತರದಲ್ಲಿ ಮಣಿಸಿ, ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

********ಮುಕ್ತಾಯ********